# 8

# ದೈವಿಕ ಮಾರ್ಗದರ್ಶನ, 2

ಗಿದ್ಯೋನನ ಕುರಿಯ ತುಪ್ಪಟವನ್ನು ಜ್ಞಾಪಿಸಿಕೊಳ್ಳಿರಿ. ಮಾರ್ಗದರ್ಶನಕ್ಕಾಗಿ ನಾವು ಪ್ರಾರ್ಥಿಸುತ್ತೇವೆ, ಮತ್ತು ದೇವರ ಉತ್ತರಕ್ಕಾಗಿ ನಾವು ನೋಡತಕ್ಕದ್ದು. ಪ್ರಾರ್ಥನೆಯು ಬಲವಾದದ್ದು ಯಾಕಂದರೆ ದೇವರು ಪ್ರಾರ್ಥನೆಯನ್ನು ಕೇಳುತ್ತಾನೆ ಮತ್ತು ಉತ್ತರ ಕೊಡುತ್ತಾನೆ. ಬಲವುಳ್ಳದ್ದನ್ನು ನಾವು ಸುಲಭವಾಗಿ ತಪ್ಪಾಗಿ ಅರ್ಥಮಾಡಿಕೊಳ್ಳಬಹುದು ಮತ್ತು ದುರುಪಯೋಗಪಡಿಸಬಹುದು. ಇದು ಪ್ರಾರ್ಥನೆಯ ಬಗ್ಗೆ ವಾಸ್ತವಿಕತೆಯಾಗಿದೆ. ಪರಿಶುದ್ಧ ಬರಹಗಳಲ್ಲಿ ದೇವರು ದಿನದಿನವೂ, ನಿರ್ದಿಷ್ಟವಾದ ನಿರ್ದೇಶನಗಳನ್ನು ಕೊಟ್ಟದ್ದು ಕ್ವಚಿತ. ಆತನು ನಮ್ಮನ್ನು ನಮ್ಮ ಭಾವನೆಗಳಿಂದ ನಡಿಸುವದಿಲ್ಲ ಎಂಬುದು ಸ್ಪಷ್ಟವಾಗಿದೆ. ನಾವು ಪ್ರಾರ್ಥಿಸುತ್ತೇವೆ. ನಾವು ಹುಡುಕುತ್ತೇವೆ. ನಾವು ಕಾದುಕೊಂಡಿರುತ್ತೇವೆ. ನಾವು ಸೇವೆ ಮಾಡುತ್ತೇವೆ. ನಾವು ಪ್ರಾರ್ಥನೆಯಲ್ಲಿ ನಂಬುತ್ತೇವೆ ಯಾಕಂದರೆ ನಾವು ದೇವರಲ್ಲಿ ವಿಶ್ವಾಸವನ್ನಿಡುತ್ತೇವೆ. ನಮಗೆ ಉತ್ತರಿಸಲ್ಪಟ್ಟ ಪ್ರಾರ್ಥನೆಯ ಪ್ರಯೋಗ ವಾದಿ, ವೈಜ್ಞಾನಿಕ ಪುರಾವೆಯಿರುವದಿಲ್ಲ. ನಾವು ನೋಡುವುದರಿಂದ ಅಲ್ಲ, ಆದರೆ ನಂಬುವದರಿಂದ ಜೀವಿಸುತ್ತೇವೆ. ನಾವು ಪುರಾವೆಯಿಂದಲ್ಲ ಆದರೆ ನಂಬಿಕೆಯಿಂದ ಜೀವಿಸುತ್ತೇವೆ. ಪ್ರಾರ್ಥನೆಯಿಂದಲೂ ಸಹ ನಾವು ದೇವರನ್ನು ನಿರ್ವಹಿಸಲಾರೆವು. ದೇವರನ್ನು ನಂಬಲು, ಪ್ರಾರ್ಥನೆಯಲ್ಲಿ ನಿಷ್ಠೆಯಿಂದ ಇರಲು, ನಂಬಲು ಮತ್ತು ವಿಧೇಯರಾಗಲು ನಾವು ಕಲಿತುಕೊಳ್ಳತಕ್ಕದ್ದು. ಒಬ್ಬನಲ್ಲಿ ನಂಬಿಕೆಯಿಡುವುದು, ಆ ಒಬ್ಬನಿಗೆ ನಿನ್ನನ್ನೇ ಕೊಡುವದಕ್ಕೆ ಸಮನಾಗಿದೆ. ನಾವು ಪ್ರಾರ್ಥಿಸುವಂತೆ ನಂಬುವುದು ಚಿನ್ನಹದಲ್ಲಿ ನಮ್ಮನ್ನು ಠೇವಣಿಯನ್ನಟ್ಟಂತಾಗಿರುತ್ತದೆ. ಪ್ರಾರ್ಥನೆಯು "ಕತ್ತಲೆಯಲ್ಲಿ ಸಿಳ್ಳೆ ಹೊಡೆಯುವಂಥದ್ದು" ಆಗಿರುವದಿಲ್ಲ - ಅದು "ಬೆಳಕಿನ ಕಡೆಗೆ ನಡೆಯುವುದು" ಆಗಿದೆ. ನಂಬಿಕೆಯ ಉದ್ದೇಶವು ಅದರ ಮೌಲ್ಯವನ್ನು ತೀರ್ಮಾನಿಸುತ್ತದೆ. ನಾವು ದೇವರಲ್ಲಿ ನಂಬುತ್ತೇವೆ.

ಒಂದು ಆಧುನಿಕ ಪಾಖಂಡವಾದವು ದೇವರಿಗೆ "ನನ್ನ ಇಡೀ ಜೀವನಕ್ಕಾಗಿ ಪರಿಪೂರ್ಣ ಚಿತ್ತವಿದೆ" ಎಂಬುದು. ಬೈಬಲಿನಲ್ಲಿ ಕೆಲವರು ಜನಿಸುವದಕ್ಕಿಂತ ಮೊದಲು ದೇವರಿಂದ ಕರೆಯಲ್ಪಟ್ಟರು: ಯೆರೆಮೀಯ, ಸ್ನಾನಿಕನಾದ ಯೋಹಾನ, ಇತ್ಯಾದಿ. ಹೀಗಿದ್ದರೂ ಇದು ನಿಯಮವಾಗಿರಲಿಲ್ಲ, ಭಿನ್ನತೆಯಾಗಿತ್ತು. ಅನೇಕ ಯುವಜನರು ತಾವು ಜನಿಸುವದಕ್ಕಿಂತ ಮೊದಲು ತಮಗಾಗಿ ದೇವರಿಗಿದ್ದ ಯೋಜನೆಗಳನ್ನು ಹುಡುಕುತ್ತಾರೆ. ಈ ತತ್ವಕ್ಕೆ ಒಳ್ಳೇ ಉದ್ದೇಶಗಳಿದ್ದರೂ, ಅದಕ್ಕೆ ಹಲವಾರು ಸಮಸ್ಯೆಗಳಿರುತ್ತವೆ.

ಈ ತತ್ವವು ವಿಶ್ವಾಸದ ಜೀವ ಪರ್ಯಂತರದ ಸಾಹಸವನ್ನು ತಪ್ಪಾಗಿ ತಿಳಿದುಕೊಳ್ಳುತ್ತದೆ. ನಂಬಿಗಸ್ತರ ತಂದೆಯಾದ ಅಬ್ರಹಾಮನು ಅವರ ಪ್ರಾಥಮಿಕ ಉದಾಹರಣೆಯಾಗಿದ್ದಾನೆ. ಅವನು ದೇವರಿಂದ ಕರೆಯಲ್ಪಟ್ಟಾಗ, ಅವನಿಗೆ ಮಾರ್ಗ ನಕಾಸೆಯನ್ನು ಇಲ್ಲವೇ ದೈನಂದಿನ ನಿರ್ದಿಷ್ಟವಾದ ಕೆಲಸದ ವಿವರಣೆಯನ್ನು ಕೊಡಲಿಲ್ಲ. ಅವನು ಸುಮ್ಮನೇ ತನ್ನ ವಿಶ್ವಾಸದ ಹಸ್ತವನ್ನು ದೇವರ ಹಸ್ತದಲ್ಲಿ ಇಟ್ಟನು. ಪ್ರಾರ್ಥನೆಗಳಿಗೆ ಉತ್ತರವಾಗಿ, ವಿಶ್ವಾಸವುಳ್ಳ ಜನರ ಬಳಿಗೆ ದೇವರು ಬರುತ್ತಾನೆ, ಆದರೆ ದೈನಂದಿನ ನಿರ್ದಿಷ್ಟತೆಗಳೊಂದಿಗೆ ಆತನು ಬರುವದಿಲ್ಲ - ನಮ್ಮ ಜೊತೆಯಲ್ಲಿ

ನಮ್ಮ ಕೂಡ ಮಾತಾಡಲು ಆತನು ಬರುತ್ತಾನೆ. *ಎಂಥಾ ಅತಿ ಶ್ರೇಷ್ಠವಾದ ಸೌಕರ್ಯ!*

ದೇವರು ನಮ್ಮೊಂದಿಗೆ ನಡೆಯುತ್ತಿರುವನೆಂಬುದನ್ನು ತಿಳಿಯುವುದು ಭಯದಿಂದ ದುರ್ಬಲರಾಗುವದರಿಂದ ನಮ್ಮನ್ನು ಕಾಪಾಡುತ್ತದೆ. ಒಂದು ತಪ್ಪಾದ ತೀರ್ಮಾನವು, ಒಂದು ಕೆಟ್ಟದಾದ ತಪ್ಪು ನಮ್ಮ ಜೀವಿತಗಳನ್ನು ಸದಾಕಾಲಕ್ಕೂ ಹಾಳು ಮಾಡುವದಿಲ್ಲ. ದಾವೀದನು "ಜಾರಿ ಬೀಳುತ್ತಿದ್ದಾಗಲೂ" ದೇವರು ಅವನೊಂದಿಗೆ ನಡೆದನು. ಅಬ್ರಹಾಮನು ತನ್ನ ಅನೇಕ ತಪ್ಪುಗಳೊಂದಿಗಿದ್ದಾಗಲೂ ದೇವರು ಅವನಿಗೆ ನಂಬಿಗಸ್ತನಾಗಿದ್ದನು: ಲೋಟನ ಬಗ್ಗೆ, ಸಾರಳ ಬಗ್ಗೆ ಸುಳ್ಳು ಹೇಳಿದ್ದು, ಪೀಡಿಸುವುದು, ಇಸ್ಮಾಯೇಲನ ಬಗ್ಗೆ, ತಪ್ಪುಗಳು, ದೇವರಿಗೆ ನಾವು ನಂಬಿಗಸ್ತರಾಗಿದರೇ ಇರುವಾಗಲೂ ದೇವರು ನಮಗೆ ನಂಬಿಗಸ್ತನಾಗಿರುತ್ತಾನೆ! ಪೇತ್ರನ ಅಲ್ಲಗಳೆಯುವಿಕೆಗಳಿದ್ದರೂ ಪೇತ್ರನು ಪಂಚಾಶತ್ತಮದ ದಿನದಂದು ಪ್ರಸಂಗಿಸಿದನು! ದೇವರು ಒಳ್ಳೆಯದನ್ನು ಮಾಡುತ್ತಾ ಯಾವಾಗಲೂ ಹತ್ತಿರದಲ್ಲಿರುತ್ತಾನೆ (ರೋಮಾಪುರ 8:28). ನಮ್ಮ ದೇವರು ಹೊಸ ಪ್ರಾರಂಭಗಳ ದೇವರಾಗಿರುತ್ತಾನೆ! ಎಂಥಾ ದೇವರು! ಎಂಥಾ ಕೃಪೆ! ಸ್ವೀಕರಿಸಲ್ಪಡುವದಕ್ಕಾಗಿ ಮತ್ತು ಸೇವೆಗಾಗಿ ತಪ್ಪಿಹೋದವನು ಮನೆಗೆ ಹಿಂದಿರುಗಬಹುದು ಸೋಲು ಜಗತ್ತಿನ ಅಂತ್ಯವಾಗಿರಬಾರದು!

ದೇವರು ನಮ್ಮನ್ನು ಸ್ವಾತಂತ್ರ್ಯದಲ್ಲಿ ಪ್ರಬುದ್ಧರಾಗಲು ಬಿಡುತ್ತಾನೆ. ದೇವರು ಗುಲಾಮರನ್ನು ಬಯಸುವದಿಲ್ಲ - ಆತನು ಮಕ್ಕಳನ್ನು ಬಯಸುತ್ತಾನೆ. ದೇವರು ಯಂತ್ರಮಾನವರನ್ನು ಬಯಸುವದಿಲ್ಲ - ಆತನು ಜವಾಬ್ದಾರಿಕೆಯುಳ್ಳ ದೇವ ಜನರನ್ನು ಬಯಸುತ್ತಾನೆ. ಕ್ರೈಸ್ತತ್ವ ಮತ್ತು ಪ್ರಾರ್ಥನೆ ಸಂಬಂಧಗಳನ್ನು ಒಳಗೊಂಡಿರುತ್ತದೆ. ದೇವರ ಚಿತ್ತದಲ್ಲಿ ಪ್ರೀತಿಯಿಂದ ನಾವು ಜೀವಿಸುವಂತೆ ಆತನು ನಮಗೆ ಆಯ್ಕೆ ಮಾಡಲು ಸ್ವಾತಂತ್ರ್ಯವನ್ನು ಕೊಡುತ್ತಾನೆ. ಇದು ದೇವರ ರಾಜ್ಯದ - ನಮ್ಮ ಹೃದಯಗಳಲ್ಲಿ ದೇವರ ಆಳ್ವಿಕೆಯು ಅರ್ಥವಾಗಿರುತ್ತದೆ. ದೇವರ ಚಿತ್ತವನ್ನು ಗ್ರಹಿಸಿಕೊಳ್ಳುವುದು, ದೇವರ ಚಿತ್ತವನ್ನು ಮಾಡಲಿಕ್ಕೆ ಯಾಥಾರ್ಥವಾಗಿ ಬಯಸುವ ರೀತಿಯ ವ್ಯಕ್ತಿಯಾಗುವದಕ್ಕೆ ಹೋಲಿಸಿದರೆ ಒಂದು ಚಿಕ್ಕ ಕಾರ್ಯವಾಗಿರುತ್ತದೆ.

ಈ ಉದಾಹರಣೆಗಳನ್ನು ಯೋಚಿಸಿರಿ. ಪ್ರೇಮಿಸುವದರಲ್ಲಿ, ಒಬ್ಬ ಯುವಕನು ಇಬ್ಬರು ಅದ್ಭುತಕರವಾದ ಕ್ರೈಸ್ತ ಹುಡುಗಿಯರ ಮಧ್ಯದಲ್ಲಿ ಆಯ್ಕೆ ಮಾಡಬೇಕಾಗಬಹುದು. ಹೊಸ ಪೀಠವನ್ನು ಆಯ್ಕೆ ಮಾಡುವದರಲ್ಲಿ, ಒಬ್ಬ ಪ್ರಸಂಗಿಯು ಎರಡು ಸಭೆಗಳ ಮಧ್ಯದಲ್ಲಿ ಆಯ್ಕೆಮಾಡಿಕೊಳ್ಳತಕ್ಕದ್ದು. ದೇವರು ನಿಶ್ಚಿತವಾದ ಉತ್ತರವನ್ನು ಕೊಟ್ಟರೆ, ಅವಿಧೇಯನಾಗುವುದು ಪಾಪವಾಗಿದೆ! ಆಯ್ಕೆ ಮಾಡಲು ದೇವರು *ನಮ್ಮನ್ನು* ಬಿಡುತ್ತಾನೆ. ನಮ್ಮ ಆಯ್ಕೆಗಳಿಂದ ಅತ್ಯುತ್ತಮವಾದ ಕೆಲಸಮಾಡಲು ಆತನು ಬರುತ್ತಾನೆ. ದೇವರು ನಮಗಾಗಿ ಒಂದೇ ಒಂದು ಸಂಗಾತಿಯನ್ನು ಇಲ್ಲವೇ ಒಂದೇ ಒಂದು ಪೀಠವನ್ನು ನೇಮಕಮಾಡಿದ್ದಾನೆಂದು ಬಹಳ ಜನರು ನಂಬುತ್ತಾರೆ. ಕೆಲವು ಸಂಗಾತಿಗಳು ತಪ್ಪಾಗಿರಬಹುದು. ಕೆಲವು ಸಭೆಗಳು ತಪ್ಪಾಗಿರಬಹುದು. ಕ್ರಿಸ್ತನಂತಹ ಗುಣವನ್ನು ಬೆಳಿಸಿಕೊಳ್ಳಲು ನಾವು ಪ್ರಯತ್ನಿಸುವಾಗ, ನಮ್ಮ ಆಯ್ಕೆಗಳು ಯಾವೇ ಆಗಿದ್ದರೂ, ದೇವರು ನಮ್ಮನ್ನು ಆಶೀರ್ವದಿಸುವನು ಮತ್ತು ಉಪಯೋಗಿಸುವನು! ಇದು ಪ್ರಾರ್ಥನೆಯ ನಿಜವಾದ ಮಹಿಮೆಯಾಗಿರುತ್ತದೆ! ನಮ್ಮ ಇಡೀ ಜೀವನಗಳಿಗಾಗಿ ನಮಗಾಗಿ ದೇವರಿಗೆ ಯೋಜನೆಗಳಿದ್ದರೆ, ನಾವು ಹೈಸ್ಕೂಲಿನಿಂದ ಹೊರಬೀಳುವ ಮೊದಲೇ ನಮ್ಮಲ್ಲಿ ಹೆಚ್ಚಾದವರು ಅವುಗಳನ್ನು ಹಾಳುಮಾಡಿರುವೆವು. ವಯಸ್ಕರಾಗಲು ದೇವರು ನಮ್ಮನ್ನು ಬಿಡುತ್ತಾನೆ. ಕೆಲವು ಸಮಯ, ನನ್ನ ತಂದೆ ನಿರ್ದಿಷ್ಟನಾಗಿದ್ದನು, ಆದರೆ ಹೆಚ್ಚಾದ ಸಮಯ ಅವನು ನನ್ನ ತೀರ್ಮಾನಗಳಿಗೆ ನನ್ನನ್ನೇ ಜವಾಬ್ದಾರನನ್ನಾಗಿ ಮಾಡಿದನು.

ನನ್ನ ತೀರ್ಮಾನವನ್ನು ಗೌರವಿಸುವನೆಂದು ಅವನು ಯಾವಾಗಲೂ ನನಗೆ ಹೇಳಿದನು ಮತ್ತು ಅದರಲ್ಲಿ ಹೆಚ್ಚಾದದ್ದನ್ನು ಮಾಡಲು ಸಹಾಯ ಮಾಡಿದನು. ಇದು ಸಂಬಂಧ ವಾಗಿರುತ್ತದೆ. ದೇವರು, ತನ್ನ ಕೃಪೆಯಲ್ಲಿ, ನನ್ನ "ಅಸ್ತವ್ಯಸ್ತತೆಯಲ್ಲಿ" ತಲುಪಿ ಅದರೊ ಳಗಿಂದ ಏನಾದರೊಂದನ್ನು ಮಾಡಲು ಸಿದ್ಧನಾಗಿರುವದಕ್ಕಾಗಿ ನನಗೆ ಸಂತೋಷವಿದೆ. ಇದು ಪ್ರಾರ್ಥನೆಯ ಬಲವಾಗಿದೆ. ಇದು ದೇವರ ಮಹಿಮೆಯಾಗಿದೆ.

◇◇◇◇◇◇◇◇◇

# ಪ್ರಾರ್ಥನೆಯ ಗಂಡಾಂತರ

## ಅಪೊಸ್ತಲರ ಕೃತ್ಯಗಳು 12:1-17

*"[ಪೇತ್ರನು] ಮಾರ್ಕನೆನಿಸಿಕೊಳ್ಳುವ ಯೋಹಾನನ ತಾಯಿಯಾದ ಮರಿಯಳ ಮನೆಗೆ ಬಂದನು. ಅಲ್ಲಿ ಅನೇಕರು ಕೂಡಿಬಂದು ಪ್ರಾರ್ಥನೆ ಮಾಡುತ್ತಿದ್ದರು ... ಅವರು ಬಾಗಿಲನ್ನು ತೆರೆದು ಅವನನ್ನು ಕಂಡು ಬೆರಗಾದರು" (ಅಪೊಸ್ತಲರ ಕೃತ್ಯಗಳು 12:12-16).*

"ಮಾನವರು," "ವಿನೋದಭಾವ," ಮತ್ತು "ದೀನತೆ" ಇವು ಒಂದಕ್ಕೊಂದು ಸಂಬಂಧಿಸಿದ ಪದಗಳಾಗಿವೆ. ಎಲ್ಲಾ ಮೂರೂ ಅಪೊಸ್ತಲರ ಕೃತ್ಯಗಳು 12ರಲ್ಲಿ ಪ್ರದರ್ಶಿಸಲ್ಪಟ್ಟಿವೆ. ಕ್ರೈಸ್ತರು ಮಾನವರಾಗಿದ್ದರು. ಕ್ರೈಸ್ತರು ಕೆಲ ಸಮಯಗಳಲ್ಲಿ ವಿನೋದಭಾವವುಳ್ಳವರಾಗಿರುವರು. ನಮ್ಮ ಕ್ರೈಸ್ತ ಸೋಲುಗಳು ನಮ್ಮನ್ನು ದೀನರನ್ನಾಗಿ ಮಾಡುತ್ತವೆ. ಅವೆಲ್ಲವೂ ಒಂದಾಗಿ ಹೋಗುತ್ತವೆ.

ಪ್ರಾರ್ಥನೆಯು ಗಂಡಾಂತರ ಕಾರಿಯಾದದ್ದು. ಈ ಸತ್ಯವನ್ನು ಕಳೆದುಕೊಳ್ಳುವ ಪ್ರವೃತ್ತಿಯಲ್ಲಿರುತ್ತೇವೆ. ಪ್ರಾರ್ಥನೆಯು ಬಲವಾಗಿದೆ ... ದೇವರು ಬಲವಾಗಿದ್ದಾನೆ. ಪ್ರಾರ್ಥಿಸುವ ಜನರಿಗೆ ದೊಡ್ಡ ಸಂಗತಿಗಳು ಸಂಭವಿಸುತ್ತವೆ. ನಾವು ಕೇಳುವದನ್ನು ಹೊಂದಿಕೊಳ್ಳುತ್ತೇವೆ! ನೀವು ಕೇಳುವದರ ಬಗ್ಗೆ ಎಚ್ಚರಿಕೆಯುಳ್ಳವರಾಗಿರಿ! ನಾವೆ ಲ್ಲರೂ ಜಾಗರೂಕತೆಯುಳ್ಳವರಾಗಿರತಕ್ಕದ್ದು. "ಪ್ರಾರ್ಥನೆಯಲ್ಲಿ ಗಂಡಾಂತರವು" ಯಾವುದು? ಅದು *ಲಭ್ಯವಿರುತ್ತದೆ*! ನಾವು ಅದನ್ನು ನಿರೀಕ್ಷಿಸದೇ ಇರುವಾಗಲೂ ಸಹ! ಪ್ರಾರ್ಥನೆಯಲ್ಲಿ ಹೆಚ್ಚಾಗಿ ಜಾಗರೂಕರಾಗಿರ್ರಿ - ನೀವು ಕೇಳಿದ್ದನ್ನು ನೀವು ಹೊಂದಿಕೊಳ್ಳಬಹುದು!

### ಪ್ರಾರ್ಥನೆಗೆ ಒಂದು ಅನಿರೀಕ್ಷಿತವಾದ ಉತ್ತರ

ಅಪೊಸ್ತಲರ ಕೃತ್ಯಗಳು 12:1-17 ಓದೋಣ (1) ಸಭೆಯು ಪ್ರಾರ್ಥಿಸಲು ಕೂಡಿ ಬಂದಿತು. ಇದು ಒಳ್ಳೆಯದು. ಯಾಕೋಬನು ಹೆರೋದನಿಂದ ಕೊಲೆಮಾಡಲ್ಪಟ್ಟಿದ್ದನು. ಮುಂದಿನ ಪಸ್ಕ ಹಬ್ಬದಲ್ಲಿ ಶಿಕ್ಷೆಹೊಂದಲು ಪೇತ್ರನು ಸೆರೆಮನೆಯಲ್ಲಿ ಇದ್ದನು. ಇಡೀ ಸಭೆಯು ಪ್ರಾರ್ಥಿಸಲು ಕೂಡಿಬಂದಿತು. (2) ದೇವರಿಗೆ ಪ್ರಾರ್ಥನೆಗಳು ಮಾಡಲ್ಪಟ್ಟವು. ಅವರು ಸರಿಯಾದ ವ್ಯಕ್ತಿಯ ಬಳಿಗೆ ಹೋದರು. ಅವರು ದೇವರನ್ನು ಕರೆದರು. ಅಲ್ಲಿ ಅವಸರವೂ ಅವಲಂಭನೆಯೂ ಇದ್ದವು. ಅವರು ರಾತ್ರಿಯೆಲ್ಲಾ ಪ್ರಾರ್ಥಿಸಬೇಕಾಗಿತ್ತು. ಪ್ರಾರ್ಥಿಸಲು ನಮ್ಮನ್ನು ತೆಗೆದುಕೊಳ್ಳುವದಕ್ಕೆ ಅದು ಏನು ಮಾಡುವುದು? ಹಿಂಸೆ? ಸೋಲು?

(3) ಪ್ರಾರ್ಥನೆಯು ನಿರ್ದಿಷ್ಟವಾಗಿತ್ತು, ಒಂದೇ ಒಂದು ಅಪೇಕ್ಷೆ - ಪೇತ್ರನ ಬಿಡುಗಡೆ ಆಗಿತ್ತು. ಅನೇಕ ಪ್ರಾರ್ಥನೆಗಳು ಬಹಳ ಅನಿಶ್ಚಿತತೆಯುಳ್ಳವುಗಳೂ ಸಾಮಾನ್ಯವಾದವುಗಳೂ ಆಗಿರುತ್ತವೆ. ಇದು ಐಕ್ಯಗೊಂಡ, ಅವಸರದ ಪ್ರಾರ್ಥನೆಯ ಸ್ಪರ್ಷ ನಿದರ್ಶನವಾಗಿದೆ. ಹೀಗಿದ್ದರೂ, ಅವರೆಲ್ಲರೂ ಪೇತ್ರನ ಬಿಡುಗಡೆಗಾಗಿ ನಿಜವಾಗಿ ಪ್ರಾರ್ಥಿಸುತ್ತಿದ್ದರೋ? ಅದನ್ನು ಸ್ವೀಕರಿಸುವದಕ್ಕಾಗಿ ಅವರು ಪ್ರಾರ್ಥಿಸುತ್ತಿದ್ದಿಲ್ಲವೋ (ಅವರು ಯಾಕೋಬನ ಮರಣವನ್ನು ಸ್ವೀಕರಿಸಿದ್ದಂತೆ) ಔಷಧಿಗೆ, ಸಮಯಗಳಿಗೆ, ಸಂದರ್ಭಗಳಿಗೆ ನಾವು ಒಪ್ಪಂದ ಮಾಡಿಕೊಳ್ಳುತ್ತೇವೆಯೋ? ದೇವರು ಅಸಾಧ್ಯತೆಗಳ ದೇವರಾಗಿರುತ್ತಾನೆ! ಸಭೆಯು ಭಯಗೊಂಡಿತು, ಹೆದರಿಸಲ್ಪಟ್ಟಿತು, ಆದರೆ ಅವರು ನಿಜವಾಗಿಯೂ ಏನನ್ನು ಪ್ರಾರ್ಥಿಸುತ್ತಿದ್ದರು.

ಅದು ಉತ್ತರಿಸಲ್ಪಟ್ಟ ಪ್ರಾರ್ಥನೆಯ ನಿಜವಾದ ಸಂಗತಿಯಾಗಿತ್ತು. ಯಾಕೋಬನು ಮರಣಹೊಂದಿದನು. ಪೇತ್ರನು ಜೀವಿಸಿದನು ... ಮತ್ತು ಇದು ಪ್ರಾರ್ಥನೆಯ ಒಂದು ಗೂಢವಾದ ವಿಷಯವಾಗಿದೆ. ಸಹೋದರರು ಪ್ರಾರ್ಥನೆ ಮಾಡಿದಾಗ, ದೇವರು ಕಾರ್ಯಮಾಡಿದನು. ದೇವರು ಅವರ ಪ್ರಾರ್ಥನೆಗಳಿಗೆ ಉತ್ತರಕೊಟ್ಟನು. ದೇವರು ಪ್ರಾರ್ಥಿಸುವ ಸಭೆಯನ್ನು ತಿರಸ್ಕರಿಸಲಿಲ್ಲ.

ಅದು ಸಂತೋಷಕರವಾದದ್ದೂ ಆಗಿತ್ತು! ಪೇತ್ರನು ತಾನೂ ಕನಸು ಕಾಣುತ್ತಿದ್ದೇನೆಂದು ಯೋಚಿಸಿದನು! ಪೇತ್ರನು, ಹಾಸ್ಯಕರವಾಗಿ, ಮರಣದ ಜೇಲಿನಲ್ಲಿ ಗಾಢ ನಿದ್ರೆಯಲ್ಲಿದ್ದನು. ಅದು ಪ್ರತ್ಯೇಕಿಸಿಕೊಂಡದ್ದಾಗಿತ್ತು, ನಿರೀಕ್ಷೆಯಿಲ್ಲದವನಾಗಿದ್ದನು. ಸಭೆಯು ಪ್ರಾರ್ಥಿಸುತ್ತಿದ್ದ ಸ್ಥಳಕ್ಕೆ ಹೋದನು. ಎಲ್ಲಿಗೆ ಹೋಗಬೇಕೆಂಬುದು ಅವನಿಗೆ ತಿಳಿದಿತ್ತು. ನೀನು ಭಾಗವಹಿಸುತ್ತಿದ್ದ ಸಭೆಯಲ್ಲಿ, ಸಭೆಯು ಪ್ರಾರ್ಥಿಸುವದಕ್ಕಾಗಿ ಎಲ್ಲಿ ಕೂಡಿಬರುತ್ತದೆ? ಯಾರ ಮನೆಯಲ್ಲಿ? ಈಗ ಪರಿಸ್ಥಿತಿಯು ಇನ್ನೂ "ತಮಾಷೆಯಾಗಿ" ತಿರುಗಿಕೊಂಡಿತು. ತನ್ನ ಪ್ರಾಣ ಭಯದಿಂದ ಪೇತ್ರನು ಮನೆಯ ಬಾಗಿಲನ್ನು ತಟ್ಟಿದನು. ಅವನು ಕೂಗುವದನ್ನಾಗಲೀ, ಬಾಗಿಲನ್ನು ಬಲವಾಗಿ ತಟ್ಟುವ ಪರಿಸ್ಥಿತಿಯಲ್ಲಿ ಅವನು ಇರಲಿಲ್ಲ. ಯಾರೂ ಇಲ್ಲ. ರೋದ ಎಂಬ ದಾಸಿಯು ಬಾಗಿಲ ಬಳಿಗೆ ಕಳುಹಿಸಲ್ಪಟ್ಟಳು. ಆಕೆ ಅಲ್ಲಿದ್ದದ್ದು ಮತ್ತು ಆಕೆಯ ಪ್ರಾರ್ಥನೆಗಳು ಲೆಕ್ಕಕ್ಕೆ ಹಿಡಿಯಲ್ಪಡಲಿಲ್ಲ. ಹಾಸ್ಯಕರ ವಾಗಿದೆ! ಆಗ, ಇನ್ನೂ ತಮಾಷೆಯಾದದ್ದು, ಅವನು ಪ್ರವೇಶಿಸುವಂತೆ ಬಾಗಿಲನ್ನು ತೆರೆಯಲಿಲ್ಲ! "ನಮ್ಮ ಪ್ರಾರ್ಥನೆಗಳಿಗೆ ಉತ್ತರ ದೊರೆತಿದೆ!" ಎಂದು ಪ್ರಾರ್ಥನಾ ಗುಂಪಿಗೆ ಹೇಳಲು, ಅವನು ಬಾಗಿಲು ತಟ್ಟುತ್ತಿರುವಂತೆ ಅವನನ್ನು ಬಿಟ್ಟು ಹೋದಳು. ಅವರು ಆಕೆಗೆ ಹಾಸ್ಯಮಾಡಿ, ಆಕೆಯನ್ನು ಬೈಯ್ದರು. ಪೇತ್ರನು ತಟ್ಟುತ್ತಲೇ ಇದ್ದನು - ಅದು ನಿಜವಾದದ್ದಾಗಿರಲಿಲ್ಲ. ಆಗ "ಪ್ರಾರ್ಥಿಸುವ ಸಭೆಯು" ತಟ್ಟುತ್ತಿರುವದನ್ನು ವಿವರಿಸಿತು: "ಅದು ಅವನ ದೂತನು" ಪ್ರಾರ್ಥಿಸುತ್ತಿದ್ದ ಸಹೋದರರು ಸತ್ಯವನ್ನು ನಂಬುವವರಾಗಲಿಲ್ಲ, ಆದಾಗ್ಯೂ ಮೂಢನಂಬಿಕೆಯನ್ನು ಸ್ವೀಕರಿಸಿದರು. ಅವರು ಒಂದು "ಭೂತ"ವನ್ನು ಸ್ವೀಕರಿಸಬಹುದು, ಆದರೆ ಒಂದು "ದೇಹ"ವನ್ನಲ್ಲ. ಸೆರೆಮನೆಯಿಂದ ಹೊರಗೆ ಬರುವುದು, ಪ್ರಾರ್ಥನೆಯ ಕೂಟದೊಳಗೆ ಹೋಗುವುದಕ್ಕಿಂತ ಹೆಚ್ಚು ಸುಲಭವಾಗಿತ್ತೆಂದು ಪೇತ್ರನು ಕಂಡುಕೊಂಡನು! ಇದು ನಮ್ಮ ಮೇಲೆ - ನಮ್ಮ ಪ್ರಾರ್ಥನೆಯ ಜೀವಿತಗಳ ಮೇಲೆ ಸಮನಾಗಿ ಒಂದು ವ್ಯಾಖ್ಯಾನವಾಗಿರುವುದೋ? ನಾವು ನಿಜವಾಗಿಯೂ ಏನನ್ನು ಪ್ರಾರ್ಥಿಸುತ್ತೇವೆ ... ನಿರೀಕ್ಷಿಸುತ್ತೇವೆ ... ಮತ್ತು ನಂಬುತ್ತೇವೆ? ಅಂತಿಮವಾಗಿ ಬಾಗಿಲು ತೆರೆಯಲ್ಪಟ್ಟಿತು, ಮತ್ತು ಪೇತ್ರನು ಅಲ್ಲಿ ಇದ್ದನು! ಅವರದು ಅಪನಂಬಿಕೆಯ ಸ್ಪಷ್ಟವಾದ ವಿಷಯವಾಗಿತ್ತು. ನೀವು ಪ್ರಾರ್ಥನೆ ಮಾಡುವಾಗ, ದಿನಚರಿ ಪುಸ್ತಕ ಬರೆಯುವಿರೋ? ಯಾವಾಗ, ಎಲ್ಲಿ, ಮತ್ತು ಹೇಗೆ ಪ್ರತಿಯೊಂದು ಪ್ರಾರ್ಥನೆಯು

ಉತ್ತರಿಸಲ್ಪಟ್ಟಿತು ಎಂಬುದನ್ನು ಬರೆದಿಡುವಿರೋ? ನೀವು ನಂಬುತ್ತೀರೋ?

## ಉತ್ತರಿಸಲ್ಪಟ್ಟ ಪ್ರಾರ್ಥನೆಯ ಗಂಡಾಂತರ

> ಆತನು ಅವರ ಆಶೆಯನ್ನು ಪೂರೈಸಿದರೂ ಅವರ ಪ್ರಾಣಕ್ಕೆ ಕ್ಷಯವನ್ನು ಬರ ಮಾಡಿದನು (ಕೀರ್ತನೆ 106:15).
>
> ದೇವರುಗಳು ನಮ್ಮನ್ನು ಶಿಕ್ಷಿಸುವಾಗ, ಅವರು ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸುವರು (Oscar Wilde).
>
> ಒಬ್ಬ ಮನುಷ್ಯನೊಂದಿಗೆ ದೇವರುಗಳು ಕೋಪಗೊಳ್ಳುವಾಗ, ಅವನು ಬಯಸುವದನ್ನು ಅವರು ಅವನಿಗೆ ಕೊಡುವರು (The Greeks).
>
> ... ಮನುಷ್ಯನು ಅಷ್ಟು ಬಲಹೀನನಾಗಿದ್ದಾನೆ,<br>
> ಅಷ್ಟು ಅಜ್ಞಾನಿಯಾಗಿದ್ದಾನೆ ಮತ್ತು ಕುರುಡನಾಗಿದ್ದಾನೆ, ದೇವರು ಕೆಲವು ಸಲ<br>
> ನಾವು ಕೇಳುವದನ್ನು ಕರುಣೆಯಲ್ಲಿ ಹಿಂದಿಟ್ಟು ಕೊಳ್ಳಲಿಲ್ಲವೇ,<br>
> ನಮ್ಮ ಸ್ವಂತ ಬೇಡಿಕೆಯಲ್ಲಿ ನಾವು ಹಾಳಾಗಿ ಹೋಗುವೆವು.

ವಿಮೋಚನಾಕಾಂಡದಲ್ಲಿ ಯೆಹೂದ್ಯರು ತಮ್ಮ ದಿನದ ಆಹಾರಕ್ಕಾಗಿ, ಮನ್ನಕ್ಕಾಗಿ ಗುಣಗುಟ್ಟಿದರು ಮತ್ತು ದೂರು ಹೇಳಿದರು. ದೇವರು ಅವರಿಗೆ ಲಾವಕ್ಕಿಗಳನ್ನು ಕಳುಹಿಸಿದನು (ಅರಣ್ಯಕಾಂಡ 11:31-33). ಅವರ ಹಲ್ಲುಗಳಲ್ಲಿ ರುಚಿಯಾದ ಮಾಂಸವಿದ್ದಾಗ, ದೇವರು ಅವರನ್ನು ಶಿಕ್ಷಿಸಿದನು. ಈ ಕಥೆಯು ಆಘಾತಗೊಳಿಸುವಂಥದ್ದು, ಭಯಾನಕವಾದದ್ದು, ದೀನರನ್ನಾಗಿ ಮಾಡುವಂಥದ್ದು ಆಗಿದೆ. ನಮ್ಮ ಸ್ವಂತ ನಾಶನದಲ್ಲಿ ದೇವರು ನಮ್ಮ ಪ್ರಾರ್ಥನೆಯನ್ನು ಉಪಯೋಗಿಸ ಬಹುದು. ಅರಣ್ಯಕಾಂಡ 11ರಲ್ಲಿಯ ಎಲ್ಲಾ ಜನರು ಸೋತು ಹೋದರು. ಅವರೆಲ್ಲರೂ "ದುಃಖಕರವಾದ ಪ್ರಾರ್ಥನೆಗಳನ್ನು" ಅರ್ಪಿಸಿದರು. (1) ಜನರು ಗುಣಗುಟ್ಟಿದರು. "ಕೆಟ್ಟು ಹೋದ ಮಕ್ಕಳಂತೆ" ಅವರು ದೇವರ ಕಡೆಗೆ ಗದ್ದಲ ಮಾಡಿದರು. ದೂರು ಕೊಡುವದರ ಬಗ್ಗೆ ಜಾಗರೂಕತೆಯುಳ್ಳವರಾಗಿರಿ. ದೇವರ ಪ್ರತೀಕಾರವು ತ್ವರಿತವಾದದ್ದೂ ಭಯಾನಕ ವಾದದ್ದೂ ಆಗಿತ್ತು. (2) ಮೋಶೆಯು ತನ್ನ ಬಗ್ಗೆ "ಕನಿಕರಕ ಪಾರ್ಟಿ"ಯಲ್ಲಿ ದೇವರ ಮುಂದೆ ಗುಣುಗುಟ್ಟಿದನು. ಅವನೂ ಸಹ ದೇವರ ಕಡೆಗೆ ಗೊಂದಲ ಮಾಡಿದನು. ತನ್ನನ್ನು ಹಿಂದೆಗೆದು ಕೊಳ್ಳುವೆನೆಂದು ಹೇಳಿದನು; ಒಂದು ಬಲಹೀನ ಪ್ರಾರ್ಥನೆಯಲ್ಲಿ ತನ್ನನ್ನು ಕೊಲ್ಲಬೇಕೆಂದು ದೇವರನ್ನು ಕೇಳಿದನು. (3) ಸಂಧಾನ ಮಾಡಲು ಎಪ್ಪತ್ತು ಜನ ಹಿರಿಯರು ಕರೆಯಲ್ಪಟ್ಟರು. (4) ಇತರರು ಪ್ರವಾದಿಸಿದಾಗ "ಒಳ್ಳೇ ಮುದುಕ ಯೆಹೋಶುವನು" ಸಹ ಮೋಶೆಗಾಗಿ ಅಸೂಯಪಟ್ಟನು. ಇದು ಇಸ್ರಾಯೇಲಿನ ಚರಿತ್ರೆಯಲ್ಲಿ ಒಂದು ಭಯಂಕರವಾದ ದಿನವಾಗಿತ್ತು. ದೇವರು ಅವರ ಪ್ರಾರ್ಥನೆಗೆ ಉತ್ತರ ಕೊಟ್ಟನು, ಆಗ ಮರಣದಂಡನೆ ಶಿಕ್ಷೆ ಜಾರಿಗೆ ತಂದನು. ಜನರು ಬಯಸಿದ್ದನ್ನು ದೇವರು ಅವರಿಗೆ ಕೊಟ್ಟಾಗ, ಅದು ಅಕ್ಷರಶಃವಾಗಿ ಅವರನ್ನು ಕೊಂದಿತು!

> ನೀನು ಉತ್ತರಿಸಿದ ಪ್ರಾರ್ಥನೆಗಳಿಗಾಗಿ ಉಪಕಾರ<br>
> ನೀನು ಕೊಡದೇ ಇರುವಂಥದ್ದಕ್ಕಾಗಿ ಉಪಕಾರ -

ನಾನು ತಪ್ಪಿಸಿಕೊಂಡ ಬಿರುಗಾಳಿಗಳಿಗಾಗಿ ಉಪಕಾರ,
ನೀನು ಒದಗಿಸುವ ಎಲ್ಲದಕ್ಕಾಗಿ ಉಪಕಾರ -
ನೋವಿಗಾಗಿ, ಉಪಕಾರ, ಮತ್ತು ಆನಂದಕ್ಕಾಗಿ ಉಪಕಾರ -
ನಿರಾಶೆಯಲ್ಲಿ ಆದರಣೆಗಾಗಿ ಉಪಕಾರ.
ಯಾರೂ ಅಳೆಯಲಾಗದ ಕೃಪೆಗಾಗಿ ಉಪಕಾರ -
ಹೋಲಿಕೆಯನ್ನು ದಾಟಿ ಇರುವ ಪ್ರೀತಿಗಾಗಿ ಉಪಕಾರ.

ದೇವರು ಬಹಳ ಒಳ್ಳೆಯವನು! ಆತನು ಇಸ್ರಾಯೇಲ್ಯರಿಗೆ ಕೃಪಾಳುವಾಗಿದ್ದನು, ಮೋಶೆಯೊಂದಿಗೆ ತಾಳ್ಮೆಯುಳ್ಳವನಾಗಿದ್ದನು, ಎಪ್ಪತ್ತು ಹಿರಿಯರೊಂದಿಗೆ ಬುದ್ಧಿ ವಂತನಾಗಿದ್ದನು ಮತ್ತು ಯೆಹೋಶುವನಿಗೆ ದಯೆಯುಳ್ಳವನಾಗಿದ್ದನು.

ಉತ್ತರಿಸಲ್ಪಟ್ಟ ಪ್ರಾರ್ಥನೆಯ ಇನ್ನೊಂದು ಉದಾಹರಣೆಯು ಅರಸ ಹಿಜ್ಕೀ ಯನನ್ನು ಒಳಗೊಂಡಿರುತ್ತದೆ (2 ಅರಸುಗಳು 20:14-37; 2 ಪೂರ್ವಕಾಲವೃತ್ತಾಂತ 32:20-26; ಯೆಶಾಯ 38:1-8). ಒಂದು ಘಟನೆಯು ಬೈಬಲಿನಲ್ಲಿ ಮೂರು ಸಲ ಇರುವುದು ಗಮನ ಸೆಳೆಯುತ್ತದೆ. ಯೆಶಾಯನು (ದೇವರಿಗಾಗಿ) ಹಿಜ್ಕೀಯನಿಗೆ ಅವನು ಸಾಯಲಿಕ್ಕಿದ್ದಾನೆಂದು ಹೇಳಿದನು. ಹಿಜ್ಕೀಯನು ತನ್ನ ಮುಖವನ್ನು ಗೋಡೆಯ ಕಡೆಗೆ ತಿರುಗಿಸಿ, ಪ್ರಾರ್ಥಿಸಿದನು. ಬಹುಶಃ ಅವನು ಒಟ್ಟಾಗಿ ಸ್ವಾರ್ಥಿಯಾಗಿರಲಿಲ್ಲ - ಅವನ ಕೆಲಸವು ಮುಗಿದಿರಲಿಲ್ಲ. ಮತ್ತು ಅವನು ಅದನ್ನು ಪೂರ್ತಿಗೊಳಿಸಲು ಬಯಸಿದ್ದನು. ಅವನ ಉದ್ದೇಶಗಳು ಏನೇ ಇರಲಿ, ದೇವರು ಅವನ ಪ್ರಾರ್ಥನೆಯನ್ನು ಕೇಳಿದನು ಮತ್ತು ಅವನ ಕಣ್ಣೀರುಗಳನ್ನು ನೋಡಿದನು. ಒಂದು ವಾಗ್ದಾನ ಮತ್ತು ಅದ್ಭುತಕಾರ್ಯದೊಂದಿಗೆ ದೇವರು ಯೆಶಾಯನನ್ನು ಕಳುಹಿಸಿದನು: ಹಿಜ್ಕೀಯನಿಗೆ ಹದಿನೈದು ಹೆಚ್ಚು ವರ್ಷಗಳು ಕೊಡಲ್ಪಡುವವು. ಮೋಶೆಯು ಬಹಳ ಬೇಗನೇ ಸತ್ತುಹೋದ ಮನುಷ್ಯನು; ಹಿಜ್ಕೀಯನು ಬಹಳ ದೀರ್ಘವಾಗಿ ಜೀವಿಸಿದ ಮನುಷ್ಯನು. ಗರ್ವವು - ದೀನತೆಯಲ್ಲ - ಹಿಜ್ಕೀಯನನ್ನು ಜಯಿಸಿತು! “ಅವನು ದೇವರನ್ನು ಮಿತಿಮೀರಿ ಮಾತಾಡಿದನು ಮತ್ತು ಜಯಿಸಿದನು!” ಇದು ಪ್ರಾರ್ಥನೆಯ ಸ್ಥಳವಲ್ಲ. ದೇವರು ನಮ್ಮ ಪ್ರಾರ್ಥನೆಗೆ ಉತ್ತರವನ್ನು ಗಮನಿಸುವುದು ನಮಗೆ ಬೋಧಿಸಬೇಕು ಮತ್ತು ನಮ್ಮನ್ನು ಸ್ಪರ್ಶಿಸಬೇಕು! ಹಿಜ್ಕೀಯನು ಆ ಹೆಚ್ಚಿನ ವರ್ಷಗಳಲ್ಲಿ ಅನೇಕ ಸ್ಮಾರಕವಾದ “ಗರ್ವದ ತಪ್ಪುಗಳನ್ನು” ಮಾಡಿದನು. ಅವನಿಗೆ ಒಬ್ಬ ಮಗನೂ ಇದ್ದನು: ಮನಾಸ್ಸೆ. ಅವನು ಉತ್ತರಾಧಿಕಾರಿಯಾದನು ಹಾಗೂ ಅಪಕೀರ್ತಿಯಿಂದ ಆಳಿದನು. ಮನಾಸ್ಸೆಯ ಪಾಪಗಳ ಕಾರಣದಿಂದ ದೇವರು “ಯೆರೂಸಲೇಮನ್ನು ಒಂದು ಊಟದ ತಟ್ಟೆಯಂತೆ” ತೊಳೆದನು. ಹಿಜ್ಕೀಯನೊಂದಿಗೆ ವ್ಯಂಗ್ಯವು, ದೇವರಿಂದ ಅವನು ಅಭಿವೃದ್ಧಿಗೊಂಡಷ್ಟು, ಅವನು ಹೆಚ್ಚು ಪಾಪ ಮಾಡಿದನು.

## ಕಾಲ ನಿಯಮವು ಮೂಲ ಸತ್ವವಾಗಿದೆ

ಇನ್ನೊಂದು ಅತ್ಯಂತ ಮನೋಹರವಾದ ಉತ್ತರಿಸಲ್ಪಟ್ಟ ಪ್ರಾರ್ಥನೆಯು ಲೂಕ 1ರಲ್ಲಿ ಇರುತ್ತದೆ. ಜಕರೀಯ ಮತ್ತು ಎಲಿಜಬೇತಳು ಒಳ್ಳೇ ಜನರಾಗಿದ್ದರು, ಪ್ರಾರ್ಥಿಸುವ ಜನರಾಗಿದ್ದರು. ಅವರು ಒಂದು ಮಗುವನ್ನು, ಒಬ್ಬ ಮಗನನ್ನು ಬಯಸಿದ್ದರು. ವರ್ಷಗಳ ವರೆಗೆ ಅವರು ಪ್ರಾರ್ಥಿಸಿದ್ದರು ಮತ್ತೂ ಪ್ರಾರ್ಥಿಸಿದರು. ಅವರ ಸಮಯವು ದಾಟಿಹೋಗಿದ್ದರೂ, ಅವರು ಪ್ರಾರ್ಥಿಸುವದನ್ನು ಮುಂದರಿಸಿದ್ದರು. ಜಕರೀಯನು ಸೇವೆ ಮಾಡುತ್ತಿದ್ದಾಗ (ಒಬ್ಬ ಯಾಜಕನ ಅತೀ ದೊಡ್ಡ ಅವಕಾಶ),

ಒಬ್ಬ ದೇವದೂತನು, ಗಬ್ರಿಯೇಲನು ಬಂದನು. ಜಕರೀಯನು ತನ್ನ ಧೂಪವನ್ನು ಅರ್ಪಿಸುತ್ತಿದ್ದಾಗ, ಕುಟುಂಬ ಮತ್ತು ಸ್ನೇಹಿತರು ಹೊರಗೆ ಪ್ರಾರ್ಥಿಸುತ್ತಿದ್ದರು. ಗಬ್ರಿಯೇಲನು ಜಕರೀಯನಿಗೆ ಅವನ ಪ್ರಾರ್ಥನೆಯು ಕೇಳಲ್ಪಟ್ಟಿದೆ ಮತ್ತು ಉತ್ತರಿಸಲ್ಪಡುವುದು ಎಂದು ಹೇಳಿದನು. ಅವರಿಗೆ ಒಬ್ಬ ಮಗನಾಗುವನು, ಅವನು ಯೋಹಾನನು. ಅವನು ದೇವರಿಂದ ಅದ್ವಿತೀಯವಾಗಿ ಉಪಯೋಗಿಸಲ್ಪಡುವ ಮನುಷ್ಯನಾಗಿರುವನು. ಜಕರೀಯನು ಆನಂದದಿಂದ ಕುಣಿದು ಕುಪ್ಪಳಿಸಿರಬಹುದೆಂದು ಒಬ್ಬನು ಯೋಚಿಸಬಹುದು. ಅವನು ಮೂಕನಾದನು! (1) ಅಂತರಾಳದಲ್ಲಿ ಅವನು ದೇವರು ತನ್ನ ಪ್ರಾರ್ಥನೆಗೆ ಉತ್ತರ ಕೊಡುವನೆಂದು ನಂಬಿರಲಿಲ್ಲ. ಅನೇಕ ವರ್ಷಗಳಿಂದ ಅವನ ಪ್ರಾರ್ಥನೆಗಳು ಆಚರಣೆಗಳಾಗಿದ್ದವು, ಸಂಶಯದಿಂದ ತುಂಬಿದ್ದವು. (2) ವರ್ಷಗಳ ಹಿಂದೆ ಅವನ ಪ್ರಾರ್ಥನೆಗಳು ಉತ್ತರಿಸಲ್ಪಡಬೇಕೆಂದು ಅವನು ಬಯಸಿದ್ದನು.

ನಮ್ಮ ಹೆಚ್ಚಾದ ಪ್ರಾರ್ಥನೆಗಳ ಮೇಲೆ ನಾವು "ಸಮಯ ಮಿತಿಯನ್ನು" ಹಾಕುತ್ತೇವೆ. ಸಮಯವು ಪ್ರತಿಯೊಂದು ಸಂಗತಿಯಾಗುತ್ತದೆ. ಜಕರೀಯನು ಉದಾಸೀನತೆಯಿಂದ, "ನಾನು ಮುದುಕನು; ನನ್ನ ಹೆಂಡತಿಯೂ ದಿನಹೋದವಳು" (ಲೂಕ 1:18ಬಿ) ಎಂದು ಹೇಳಿದನು. ಅವನು ಇನ್ನೂ ದೇವರೊಂದಿಗೆ ನಿರಾಶೆಹೊಂದಿದವನಾಗಿದ್ದನು - ಹೌದು, ದೇವರು ಅವರ ಪ್ರಾರ್ಥನೆಗಳಿಗೆ ಉತ್ತರಕೊಟ್ಟನು, ಆದರೆ ಬಹಳ ತಡವಾಗಿ! ಜಕರೀಯನು ದೇವರನ್ನು ಕೊಂಡಾಡಿ ಆತನಿಗೆ ಉಪಕಾರ ಹೇಳುವಲ್ಲಿ ಸೋತುಹೋದನು. "ಅವನ ಹೆಸರು ಯೋಹಾನ" ಎಂದು ಹಲಿಗೆಯ ಮೇಲೆ ಅವನು ಬರೆಯುವವರೆಗೆ ಅವನು ಮಾತನಾಡಲಾರದವನಾಗಿದ್ದನು (ಲೂಕ 1:63ಬಿ). *ಜ್ಞಾಪಿಸಿಕೊಳ್ಳಿರಿ!* ದೇವರ ತಡಮಾಡುವಿಕೆಗಳು ದೇವರು ಅಲ್ಲಗಳೆಯುವಿಕೆಗಳಾಗಿರುವದಿಲ್ಲ!

## ದೇವರು ನಮ್ಮ ಪ್ರಾರ್ಥನೆಗಳನ್ನು ಕೇಳುತ್ತಾನೆ ಮತ್ತು ಉತ್ತರ ಕೊಡುತ್ತಾನೆ

ದೇವರು ನಂಬಿಗಸ್ತನು. ಪ್ರತಿಯೊಬ್ಬ ಕ್ರೈಸ್ತನು ಕೇಳಲ್ಪಡುತ್ತಾನೆ ಮತ್ತು ಉತ್ತರಿಸಲ್ಪಡುತ್ತಾನೆ. (1) "*ಇಲ್ಲ!* ನಿನಗೆ ಅದನ್ನು ಕೊಡದಷ್ಟು ನಾನು ನಿನ್ನನ್ನು ಪ್ರೀತಿಸುತ್ತೇನೆ." (2) "*ಇಲ್ಲ!* ಇನ್ನೂ ಇಲ್ಲ, ಆದರೆ ಅನಂತರ - ನೀನು ಸಿದ್ಧನಾಗುವಾಗ." (3) "*ಹೌದು!* ನೀನೆಂದೂ ಕೇಳುವದಿಲ್ಲ ಎಂದು ಯೋಚಿಸಿದ್ದೇನೆ." (4) "*ಹೌದು!* ಮತ್ತು ಅಲ್ಲಿ ಹೆಚ್ಚು ಇರುವುದು!"

ಆದುದರಿಂದ, ಪ್ರಾರ್ಥನೆಯು ಗಂಡಾಂತರಕಾರಿಯಾದದ್ದಾಗಿರುತ್ತದೆ. ನೀವು ಕೇಳುವಂಥದ್ದರ ಬಗ್ಗೆ ಜಾಗರೂಕರಾಗಿರ್ರಿ. ಒಬ್ಬ ಬೇಸರಗೊಂಡ ಪ್ರಸಂಗಿಯು ತನ್ನು ಸೇವೆಯಲ್ಲಿ ಬೇಗನೇ ಕಾರ್ಯಮಾಡಬೇಕೆಂದು ದೇವರನ್ನು ಕೇಳಿಕೊಂಡನು. ಮುಂದಿನ ವಾಸ ಪ್ರಸಂಗಿಯು ಕೆಲಸದಿಂದ ತೆಗೆದು ಹಾಕಲ್ಪಟ್ಟನು. "ದೇವರೇ, ನನ್ನನು ಶುದ್ಧನನ್ನಾಗಿ ಮಾಡು, ನನ್ನನ್ನು ಶುದ್ಧನನ್ನಾಗಿ ಮಾಡು" ಎಂದು ಔಗುಸ್ತೀನನು ಹೇಳುತ್ತಿದ್ದನು. ರಹಸ್ಯವಾಗಿ ಅವನು, "ಈಗಲೇ ಅಲ್ಲ, ಕರ್ತನೇ ಈಗಲೇ ಅಲ್ಲ" ಎಂದು ಕೂಡಿಸುತ್ತಿದ್ದನು. ನೀನು ಪ್ರಾರ್ಥನೆ ಮಾಡುವದನ್ನು ಪ್ರಾರಂಭಿಸುವಾಗ, ನೀನು ಕೇಳಿದ್ದನ್ನು ಪಡೆದುಕೊಳ್ಳಬಹುದು. ಅಸ್ಸಿಸ್ಸಿಯ ಫ್ರಾನ್ಸಿಸ್ಸನು ಕುಷ್ಠರೋಗಿಗಳಿಗಾಗಿ ಪ್ರಾರ್ಥಿಸಿದನು; ಬೇಗನೇ ಅವನು ತನ್ನ ಸೇವೆಯಲ್ಲಿ ಅವರ ಮಧ್ಯದಲ್ಲಿ ವಾಸಿಸುತ್ತಿದ್ದನು. "ರಾಜ್ಯದ ಮೇರೆಗಳನ್ನು ವಿಸ್ತರಿಸು" ಎಂದು ನಾವು ಪ್ರಾರ್ಥಿಸುತ್ತೇವೆ. ಇದು ನಮ್ಮನ್ನು ಮಿಶನ್ ಫೀಲ್ಡ್‌ದಲ್ಲಿ ಕಂಡುಕೊಳ್ಳಬಹುದು. "ನಿನ್ನ ಸೇವೆಯಲ್ಲಿ ನಮ್ಮನ್ನು ಸವೆಯಿಸು" ಎಂಬುದು ನಿಮ್ಮನ್ನು ಎಲ್ಲಾ ಆರಾಧನೆಗಳಲ್ಲಿ ಕಂಡುಕೊಳ್ಳುವುದು ಮತ್ತು ಬಾಗಿಲುಗಳ ಮೇಲೆ ತಟ್ಟುವದಕ್ಕೆ ನಿಮ್ಮನ್ನು ಹಾಕುವುದು. ಪ್ರಾರ್ಥನೆಯು ತಪ್ಪಿಸಿಕೊಳ್ಳುವಿಕೆಯಾಗಿರುವದಿಲ್ಲ;

ಅದು ಜಯವಾಗಿರುತ್ತದೆ.

ದೀನತೆಗಾಗಿ ಪ್ರಾರ್ಥಿಸುವುದು ಶ್ರಮೆಗಾಗಿ ಕೇಳುವುದಾಗಿದೆ. ದೇವರು ನಮಗೆ ದೀನತೆಯನ್ನು ಕೊಡಲಾರನು, ಆದರೆ ನಮ್ಮಷ್ಟಕ್ಕೆ ನಾವೇ ತಗ್ಗಿಸಿಕೊಳ್ಳಲು ಕಾರಣವಾಗುವಂಥ ಪರಿಸ್ಥಿತಿಗಳಲ್ಲಿ ಆತನು ನಮ್ಮನ್ನು ಹಾಕಬಲ್ಲನು. ಮುಖ್ಯವಾಗಿ ವಿಪತ್ತಿನಲ್ಲಿ ನಾವು ದೀನತೆಯನ್ನೂ ತಾಳ್ಮೆಯನ್ನೂ ಕಲಿತುಕೊಳ್ಳುವೆವು.

***"ಕರ್ತನೇ, ನಾನು ಪ್ರಾರ್ಥನೆಯಲ್ಲಿ ನಂಬಿಕೆ ಇಡುವದಿಲ್ಲ.***
***ನಾನು ನಿನ್ನಲ್ಲಿ ನಂಬಿಕೆಯಿಡುತ್ತೇನೆ.***
***ನಂಬಿಕೆಯಲ್ಲಿ ಪ್ರಾರ್ಥಿಸುವದನ್ನು ನನಗೆ ಕಲಿಸು."***

© 2009 Truth for Today